ದಿನಾಂಕ 20.07.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ವಾದಿಯರು ಮೈಲಪ್ಪನ ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿ ಮೈಲಪ್ಪನ ಪತ್ನಿ ಎಂದರೆ ಸರಿ. ಮೈಲಪ್ಪನಿಗೆ ಸದರಿ ವಾದಿಗಳು ಮತ್ತು 1 ನೇ ಪ್ರತಿವಾದಿ ಮಾತ್ರ ವಾರಸುದಾರರು ಎಂದರೆ ಸರಿ. ಮೈಲಪ್ಪ ದಿನಾಂಕ 20.10.2018 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ನಾನು ಮೈಲಪ್ಪನ ಸಹೋದರ ಎಂದರೆ ಸರಿ. ನಮ್ಮ ಮನೆತನದಲ್ಲಿ ನಮ್ಮಗಳ ನಡುವೆ ಮೌಖಿಕ ಪಾಲು ವಾಟ್ನಿ ಆಗಿರುತ್ತದೆ. ದಾವಾ ಆಸ್ತಿಯು ಸದರಿ ಮೌಖಿಕ ಪಾಲು ವಾಟ್ನಿಯಲ್ಲಿ ಮೈಲಪ್ಪನ ಪಾಲಿಗೆ ಹೋಗಿರುತ್ತದೆ. ಸದರಿ ಆಸ್ತಿಯು ಆತನ ಮರಣದ ತನಕ ಆತನ ಹೆಸರಿನಲ್ಲಿದ್ದು ವಹಿವಾಟು ಮಾಡಿಕೊಂಡಿದ್ದನು ಎಂದರೆ ಸರಿ.

2. ಮೈಲಪ್ಪನ ಮರಣದ ನಂತರ ವಾದಿಗಳು ಮತ್ತು 1 ನೇ ಪ್ರತಿವಾದಿ ವಾರಸುದಾರರು ಎಂದು ದಾವಾ ಆಸ್ತಿಯನ್ನು ತಮ್ಮ ಹೆಸರಿನಲ್ಲಿ ಹಚ್ಚಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ವಾದಿಗಳಿಗೆ ಮತ್ತು ಮೈಲಪ್ಪನಿಗೆ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಆ ಕಾರಣ ವಾದಿ ಮತ್ತು 1 ನೇ ಪ್ರತಿವಾದಿಗಳಿಗೆ ಸಮಾನ ಹಿಸ್ಸಾ ಇದೆ ಎಂದರೆ ಸಾಕ್ಷಿಯು ಮೈಲಪ್ಪನು ಜೀವಂತ ಕಾಲದಲ್ಲಿ ತನ್ನ ಹೆಸರಿಗೆ ಪಂಚರ ಸಮಕ್ಷಮ ಖರೀದಿಗೆ ನೀಡಿರುವುದಾಗಿ ನುಡಿಯುತ್ತಾರೆ. ಸದರಿ ಖರೀದಿಯ ಕುರಿತು ದಾಖಲೆಯನ್ನು ನ್ಯಾಯಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ಖರೀದಿ ಪತ್ರ ತನ್ನ ಬಳಿ ಇರುವ ಬಗ್ಗೆ ಪ್ರಶ್ನೆ ಕೇಳಿದ್ದು ಸಾಕ್ಷಿಯು ಹಕ್ಕು ಬಿಟ್ಟು ಕೊಟ್ಟಿರುವುದಾಗಿ ನುಡಿಯುತ್ತಾರೆ.

3. ಹಕ್ಕು ಬಿಟ್ಟು ಕೊಟ್ಟಿರುವ ಪತ್ರ ನೊಂದಣಿಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ, ಪಂಚರಿಗೆ ಗೊತ್ತಿರುತ್ತದೆ. ಮೈಲಪ್ಪನ ಮರಣದ ನಂತರ ವಾದಿಗಳು ಮತ್ತು 1 ನೇ ಪ್ರತಿವಾದಿ ದಾವಾ ಆಸ್ತಿ ಕಬ್ಜಾ ಹೊಂದಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿ ಕುರಿತು 2019 ನೇ ಸಾಲಿನಲ್ಲಿ ತಾಲೂಕು ಪಂಚಾಯತಿಗೆ ಮೇಲ್ಮನವಿ ಸಲ್ಲಿಸಿ ದಾವಾ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ಕೋವಿಡ್ ಇದ್ದ ಕಾರಣ ವಾದಿಗಳಿಗೆ ಮತ್ತು 1 ನೇ ಪ್ರತಿವಾದಿಗೆ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಂಚಾಯತಿ ಅಧಿಕಾರಿಗೊಂದಿಗೆ ಮಿಲಾಪಿಯಾಗಿ ನನ್ನ ಹೆಸರಿಗೆ ದಾಖಲೆ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

4. ಸದರಿ ತಾಲೂಕು ಪಂಚಾಯತಿ ಆದೇಶದ ವಿರುದ್ಧ ವಾದಿಗಳು ಜಿಲ್ಲಾ ಪಂಚಾಯತಿಯಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ನ್ಯಾಯಾಲಯದಲ್ಲಿ ಪ್ರಕರಣ ಬಗೆಹರಿಸಿಕೊಳ್ಳಲು ಸೂಚಿಸಲಾಗಿದೆ ಎಂದರೆ ಸರಿ. ತಾಲೂಕು ಪಂಚಾಯತಿ ಆದೇಶದ ನಂತರ ನಮ್ಮ ಮತ್ತು ವಾದಿಗಳ ನಡುವೆ ಊರಿನಲ್ಲಿ ಪಂಚಾಯತಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಪಂಚಾಯತಿಯಲ್ಲಿ ದಾವಾ ಆಸ್ತಿಯನ್ನು ವಾದಿಗಳಿಗೆ ಬಿಟ್ಟು ಕೊಡಲು ಒಪ್ಪಿಕೊಂಡಿದ್ದೇನು ಎಂದರೆ ಸರಿಯಲ್ಲ. ಸದರಿ ಪಂಚಾಯತಿಯಂತೆ ನಾನು ಬಿಟ್ಟುಕೊಡದ ಕಾರಣ ಈ

ದಾವೆ ಹೂಡಲಾಗಿದೆ ಎಂದರೆ ಸರಿಯಲ್ಲ. ದಿನಾಂಕ 01.12.2020 ರಂದು ವಾದಿಗಳು ದಾವಾ ಆಸ್ತಿಯಲ್ಲಿ ಮನೆ ಕಟ್ಟಲು ಬಂದಾಗ ಹರಕತ್ತು ಮಾಡಿರುತ್ತೇನೆ ಎಂದರೆ ಸರಿ.

**5.** ಹಕ್ಕು ಬಿಟ್ಟು ಕೊಟ್ಟ ಪತ್ರದ ಮೂಲ ದಾಖಲೆ ಗ್ರಾಮ ಪಂಚಾಯತಿಯಲ್ಲಿ ಇರುತ್ತದೆ. ಸದರಿ ದಾಖಲೆಯನ್ನು ನ್ಯಾಯಲಯಕ್ಕೆ ಹಾಜರು ಪಡಿಸಲು ಪಂಚಾಯತಿಯವರನ್ನು ಕೇಳಬೇಕು. ಆ ರೀತಿ ಯಾವುದೇ ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಬಸಪ್ಪ ಗಿಡ್ಡಪ್ಪನವರ ಮತ್ತು ಮಹೇಶಪ್ಪ ಜಾದವ ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರಕ್ಕೆ ಪಂಚರಾಗಿದ್ದರು. ಆ ಸಮಯದಲ್ಲಿ ಊರಿನವರು ಇದ್ದು, ಪಂಚರು ಮಾತ್ರ ಸಹಿ ಮಾಡಿದ್ದು ಆ ಕುರಿತು ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**6.** ಹಕ್ಕು ಬಿಟ್ಟು ಕೊಟ್ಟ ಪತ್ರದ ಮೂಲ ದಾಖಲೆ ಇಲ್ಲದಿದ್ದರೂ ಸಹ ನಿಡಿ 6 ರಂತೆ ದಾಖಲೆ ಸೃಷ್ಟಿಸಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಆದ ಕಾರಣ ಮೈಲಪ್ಪನಿಗೆ ಹಕ್ಕು ಬಿಟ್ಟು ಕೊಡುವ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಾನು ರಾಣೆಬೆನ್ನೂರಿನ ಎ ಪಿ ಎಮ್ ಸಿ ಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಮೈಲಪ್ಪ ಉಳಿಮೆ ಮಾಡಿಕೊಂಡು ಊರಿನಲ್ಲಿ ಇದ್ದ ಎಂದರೆ ಸರಿ. ಮೈಲಪ್ಪ ರಾಣೆಬೆನ್ನೂರಿಗೆ ಯಾವತ್ತು ಬಂದಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೈಲಪ್ಪನಿಗೆ ನನ್ನ ಮೇಲೆ ನಂಬಿಕೆ ವಿಶ್ವಾಸ ಇಟ್ಟಿದ್ದನು ಎಂದರೆ ಸರಿ. ಆ ಕಾರಣ ನಾನು ಹೇಳಿದಂತೆ ಕೇಳುತ್ತಿದ್ದನು ಎಂದರೆ ಸರಿಯಲ್ಲ.

**7.** ನಾನು ಮೈಲಪ್ಪನ ಆಸ್ತಿ ಮಾರಾಟ ಮಾಡಿಸಿ, ನನ್ನ ಹೆಸರಿನ ಆಸ್ತಿಯನ್ನು ಆತನ ಹೆಸರಿಗೆ ಹಕ್ಕು ಬಿಟ್ಟು ಕೊಟ್ಟ ಬರೆದು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ಕುರಿತು ನಾನು ಮೇಲ್ಮನವಿ ಸಲ್ಲಿಸಿ ಸದರಿ ಪತ್ರವನ್ನು ರದ್ದುಗೊಳಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಕುರಿತು ಸಿವಿಲ್ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಡಿ 6 ರಲ್ಲಿ ಕಾಣಿಸಿರುವ ಪಂಚರು ಎಂದಿಗೂ ಸಹ ಪತ್ರದ ಸಮಯದಲ್ಲಿ ಹಾಜರಿರಲ್ಲಿಲ್ಲ ಹಾಗೂ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.